OS 180/2016
**ಪಿಡಬ್ಲ್ಯೂ:1**

**ದಿನಾಂಕ 09.10.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು :** ಪ್ರತಿವಾದಿ ಪರಃ ಶ್ರೀ ಬಿ ಎಸ್ ಎಸ್ ವಕೀಲರಿಂದಃ

ನಿಪಿ-1 ಕರಾರು ನನ್ನ ಸೇವಾ ಅವಧಿಯಲ್ಲಿ ಆಗಿರುತ್ತದೆ ಎಂದರೆ ಸರಿ. ಕೃಷಿ ಜಮೀನು ಖರೀದಿ ಮಾಡಲು ನೀವು ನಿಮ್ಮ ಮೇಲಾಧಿಕಾರಿಯವರ ಅನುಮತಿಯನ್ನು ಪಡೆದುಕೊಂಡಿದ್ದೀರಾ ಎಂದರೆ ತೆಗೆದುಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ನಾನು ಮತ್ತು ನನ್ನ ತಂದೆ ಕೃಷಿಕರಾಗಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ-1 ರ ವ್ಯವಹಾರವನ್ನು ನೀವು ನಿಮ್ಮ 2008-09 ರ ಆದಾಯ ತೆರಿಗೆ ಪಾವತಿಯಲ್ಲಿ ತಿಳಿಸಿದ್ದೀರಾ ಎಂದರೆ ಇಲ್ಲ. ಸಾಕ್ಷಿಯು ಮುಂದುವರಿದು ನಾವು ಬಾಲೆನ್ಸ್ ಶೀಟನ್ನು ನೀಡುವುದಿಲ್ಲ ಆದ್ದರಿಂದ ನಿಪಿ-1 ರ ವ್ಯವಹಾರವನ್ನು ಆದಾಯ ತೆರಿಗೆ ಪಾವತಿಯಲ್ಲಿ ಕಾಣಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ರಂತೆ ಖರೀದಿಯ ಕರಾರಿನ ಪೂರ್ವದಲ್ಲಿ ಜಾಗದ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿಯು ನಮೂನೆ-10 ನ್ನು ಪರೀಶಿಲನೆ ಮಾಡಿದ್ದೇನೆ. ನಮೂನೆ-10 ದಾಖಲೆಯನ್ನು ಹೊರತುಪಡಿಸಿ ಬೇರೆ ದಾಖಲೆಯನ್ನು ಪರೀಶೀಲನೆ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಕಾಣಿಸಿರುವ 1ನೇ ಪ್ರತಿವಾದಿ ಅಂಬಾ ಶೆಟ್ಟಿಯವರ ತಾಯಿಯ ಹೆಸರು ನನಗೆ ಗೊತ್ತಿಲ್ಲ. ನಿಪಿ-1 ನ್ನು ಮಾಡುವ ಮೊದಲು ಅಂಬಾ ಶೆಟ್ಟಿಯವರು ನಿಮಗೆ ಎಷ್ಟು ವರ್ಷದಿಂದ ಪರಿಚಯ ಎಂದರೆ ಸಾಕ್ಷಿಯು ಅವರು ನನಗೆ ಸಂಬಂಧಿಕರು ನನಗೆ ಸುಮಾರು 60 ವರ್ಷದಿಂದ ಪರಿಚಯ ಇರುತ್ತದೆ ಎಂದು

ನುಡಿಯುತ್ತಾರೆ. ಜಲಜ ಶೆಡ್ತಿ ಎಂದರೆ ಅಂಬಾ ಶೆಡ್ತಿಯವರ ಅಕ್ಕ. ಜಲಜ ಶೆಡ್ತಿ ಮತ್ತು ದುಗ್ಗು ಶೆಡ್ತಿಯವರು ಸಹೋದರ ಸಹೋದರಿ ಅಲ್ಲ. ಜಲಜ ಶೆಡ್ತಿಯವರ ಮಗ ಭೋಜ ಶೆಟ್ಟಿ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿರುವುದಿಲ್ಲ, ತಿಳಿದು ಹೇಳುತ್ತೇನೆ ಎಂದು ನುಡಿಯುತ್ತಾರೆ. ಭೋಜ ಶೆಟ್ಟಿ 1ನೇ ಪ್ರತಿವಾದಿಯ ಗಂಡ. ಭೋಜ ಶೆಟ್ಟಿಯವರಿಗೆ 6 ಜನ ಮಕ್ಕಳು ಎಂದರೆ ಇರಬಹುದು ಎಂದು ನುಡಿಯುತ್ತಾರೆ. 2 ರಿಂದ 4ನೇ ಪ್ರತಿವಾದಿಯವರು ಹಾಗೂ ಶಕುಂತಳಾ ಮತ್ತು ಸುಧಾಕರ ಶೆಟ್ಟಿಯವರು ಭೋಜ ಶೆಟ್ಟಿ ಮತ್ತು ಅಂಬಾ ಶೆಡ್ತಿಯವರು ಮಕ್ಕಳು ಎಂದರೆ ಸರಿ. ಶಕುಂತಳಾ ಶೆಟ್ಟಿಯವರು ಮೃತಪಟ್ಟಿರಬಹುದು. ಮೃತ ಶಕುಂತಳಾ ಶೆಟ್ಟಿಯವರಿಗೆ ಎಷ್ಟು ಜನ ಮಕ್ಕಳು ಮತು ಅವರ ಹೆಸರು ನನಗೆ ಗೊತ್ತಿಲ್ಲ. ಸುಧಾಕರ ಶೆಟ್ಟಿಯವರು ಪ್ರಸ್ತುತ ಮೃತಪಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ಸಲ್ಲಿಸುವಾಗ ನಾನೇ ವಕೀಲರಿಗೆ ಮಾಹಿತಿಯನ್ನು ಕೊಟ್ಟಿರುತ್ತೇನೆ. ಸುಧಾಕರ ಶೆಟ್ಟಿಯವರು ಮೃತಪಟ್ಟ ಬಗ್ಗೆ ನಿಮ್ಮ ವಕೀಲರಿಗೆ ಮಾಹಿತಿ ನೀಡಿದ್ದೀರಾ ಎಂದರೆ ಸಾಕ್ಷಿಯು ಅಂಬಾ ಶೆಡ್ತಿಯವರು ನನಗೆ ಜಿ ಪಿ ಎ ಯನ್ನು ನೀಡಿರುತ್ತಾರೆ. ಅದರ ಆಧಾರದ ಮೇಲೆ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಅಂಬಾ ಶೆಡ್ತಿಯವರಿಗೆ ಯಾರೆಲ್ಲ ಜಿಪಿಎ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಜಿ ಪಿ ಎ ಪ್ರತಿಯನ್ನು ನನಗೆ ಕೊಟ್ಟಿರುತ್ತಾರೆ. ದಾವಾ ಆಸ್ತಿಯು ಮೂಲತಃ ಗೇಣಿ ಮುಖಾಂತರ ಬಂದಿರುವ ಜಾಗ. ದಾವಾ ಆಸ್ತಿಯನ್ನು ಭೋಜ ಶೆಟ್ಟಿಯವರು ಚಾಲ ಗೇಣಿಗೆ ಪಡೆದುಕೊಂಡಿರುತ್ತಾರೆ. ಭೋಜ ಶೆಟ್ಟಿಯವರಿಗೆ ಚಾಲ ಗೇಣಿಯಿಂದ ಬಂದಿದೆ ಎನ್ನುವ ಬಗ್ಗೆ ಯಾವುದೇ ದಾಖಲೆಯನ್ನು ನಾನು ನೋಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ನಮೂನೆ-7 ರಲ್ಲಿ ಭೋಜ ಶೆಟ್ಟಿಯವರು ತನ್ನ ಹೆಂಡತಿ ಮತ್ತು ಮಕ್ಕಳಿಗೆ ಹಕ್ಕು ನೀಡಿದ ದಾಖಲೆಯಲ್ಲಿ ಭೋಜ ಶೆಟ್ಟಿಯವರಿಗೆ ಚಾಲ ಗೇಣಿಯಿಂದ ಬಂದಿರುತ್ತದೆ ಎಂದು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನಮೂನೆ-7 ರ ಪ್ರತಿ ನನ್ನ ಬಳಿ ಇದೆ. ಭೋಜ

ಶೆಟ್ಟಿಯವರು ದಾವ ಆಸ್ತಿಗಳನ್ನು ಯಾರಿಂದ ಗೇಣಿಗೆ ತೆಗೆದುಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಎಷ್ಟು ವರ್ಷದಿಂದ ಗೇಣಿಗೆ ವಹಿಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಭೋಜ ಶೆಟ್ಟಿಯವರು ಗೇಣಿಯಿಂದ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ಭೋಜ ಶೆಟ್ಟಿಯವರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮೂಲತಃ ಜಲಜ ಶೆಡ್ತಿ ಮತ್ತು ದುಗ್ಗು ಶೆಟ್ಟಿಯವರಿಗೆ ಸೇರಿರುವ ಆಸ್ತಿ ಎಂದರೆ ಸರಿಯಲ್ಲ. ದುಗ್ಗು ಶೆಟ್ಟಿಯವರಿಗೆ ವಿಠಲ ಶೆಟ್ಟಿ, ಗೀತಾ ಶೆಟ್ಟಿ, ವನಜಾ ಶೆಟ್ಟಿ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ವನಜಾ ಶೆಟ್ಟಿಯವರಿಗೆ ಪ್ರೇಮ, ಕರುಣಾಕರ ಮತ್ತು ಪ್ರವೀಣ್ ಎಂಬ ಮಕ್ಕಳು ಇದ್ದರು ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗಳು ಜಲಜ ಶೆಟ್ಟಿ ಮತ್ತು ದುಗ್ಗು ಶೆಟ್ಟಿಯವರ ಕುಟುಂಬದ ಆಸ್ತಿ ಎಂದರೆ ಸರಿಯಲ್ಲ.

ಅಂಬಾ ಶೆಡ್ತಿಯವರು ಸಹಿ ಮಾಡುತ್ತಿದ್ದರು. ಅವರ ವಿದ್ಯಾಭ್ಯಾಸ ಎಷ್ಟು ಎಂದು ನನಗೆ ಗೊತ್ತಿಲ್ಲ. ನಿಪಿ-1 ಕರಾರಿಗೆ ನಾನು, ಅಂಬಾ ಶೆಡ್ತಿ ಮತ್ತು ಇಬ್ಬರು ಸಾಕ್ಷಿದಾರರು ಸಹಿ ಹಾಕಿರುತ್ತೇವೆ. ನಿಪಿ-1 ನ್ನು ಮಾಡಿಕೊಳ್ಳುವಾಗ ನಿಪಿ-1 ರಲ್ಲಿ ತಿಳಿಸಿರುವ 1 ನೇ ಪಕ್ಷಗಾರ ಅಂಬಾ ಶೆಡ್ತಿ ಮತ್ತು ಇತರರ ಯಾವುದೇ ಗುರುತಿನ ಚೀಟಿಯನ್ನು ಪಡೆದುಕೊಂಡಿದ್ದೀರಾ ಎಂದರೆ ಇಲ್ಲ, ಸಾಕ್ಷಿಯು ಮುಂದುವರಿದು ನನಗೆ ಅಂಬಾ ಶೆಡ್ತಿಯವರು ಜಿಪಿಎ ಪ್ರತಿಯನ್ನು ನೀಡಿರುತ್ತಾರೆ. ನಿಪಿ-1 ರಲ್ಲಿ ಕಾಣಿಸಿರುವ ಪಕ್ಷಗಾರರ ನಿಜವಾದ ವಯಸ್ಸು ಅಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ತಿಳಿಸಿರುವ ಪಕ್ಷಗಾರರು ಪ್ರಾಯಸ್ಥರಾಗಿದ್ದರೂ ಕೂಡ ಅಪ್ರಪ್ತಾ ವಯಸ್ಕರು ಎಂದು ತೋರಿಸಿದ್ದೀರಾ ಎಂದರೆ ನನಗೆ ಅಂಬಾ ಶೆಡ್ತಿಯವರು ಜಿಪಿಎ ನೀಡಿರುತ್ತಾರೆ ಅದರ ಆಧಾರದ ಮೇಲೆ ನಿಪಿ-1 ನ್ನು ಮಾಡಿರುತ್ತಾರೆ. ನಿಪಿ-1 ರಲ್ಲಿ ಎಲ್ಲ ಪಕ್ಷಗಾರರು ಅಂಬಾ ಶೆಡ್ತಿಯವರಿಗೆ ಜಿಪಿಎ ಮಾಡಿಕೊಟ್ಟಿದ್ದಾರಾ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ. ಅವರು ಜಿಪಿಎ ಮಾಡಿ ನನಗೆ ಕೊಟ್ಟಿರುತ್ತಾರೆ. ನಾನು ಹೇಳುವಂತಹ ಜಿಪಿಎ ಹಾಗೂ ನಿಪಿ-1 ಕ್ಕೊ

ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ರಂತೆ ಕ್ರಯದ ಕರಾರು ಆಗಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯವರು ಅವಿದ್ಯಾವಂತರಾಗಿದ್ದರಿಂದ ನನಗೆ ಬೇಕಾದ ರೀತಿಯಲ್ಲಿ ನಾನು ನಿಪಿ-1 ನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದಂತಹ ನಿಪಿ-2 ಮತ್ತು 3 ಕ್ಕೂ ಹಾಗೂ ನಿಪಿ-1 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ-2 ಮತ್ತು 3 ರಲ್ಲಿ ದಾವ ಸೊತ್ತಿನ ಸರ್ವೆ ನಂಬರ್ ಇಲ್ಲ ಎಂದರೆ ಸಾಕ್ಷಿಯು ಅದನ್ನು ನೋಡಿ ಹೇಳಬೇಕು ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿದ ನಿಪಿ-2 ಮತ್ತು 3 ರ ಆಧಾರದಲ್ಲಿ ಅಂಬಾ ಶೆಡ್ತಿಯವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿಪಿ-2 ಮತ್ತು 3 ನ್ನು ನನಗೆ ಬೇಕಾದ ರೀತಿಯಲ್ಲಿ ಪಕ್ಷಗಾರರ ಗಮನಕ್ಕೆಬಾರದೆ ತಿದ್ದುಪಡಿ ಮಾಡಿದ್ದೇನೆ ಎಂದರೆ ಸಾಕ್ಷಿಯು ತಿದ್ದುಪಡಿಯನ್ನು ಪಕ್ಷಗಾರರ ಸಮಕ್ಷಮ ನೋಟರಿ ವಕೀಲರ ಕಚೇರಿಯಲ್ಲಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿದ ನಿಪಿ-2 ಮತ್ತು 3 ರಲ್ಲಿ ತಿದ್ದುಪಡಿ ಮಾಡಿರುವ ಜಾಗದಲ್ಲಿ ಪಕ್ಷಗಾರರ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ಅದನ್ನು ನೋಟರಿ ವಕೀಲರ ಕಚೇರಿಯಲ್ಲಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ-2 ಮತ್ತು 3 ರ ತಿದ್ದುಪಡಿಗೆ ನೋಟರಿ ವಕೀಲರು ಸಹ ಸಹಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿತಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಸಲ್ಲಿಸಿರುವ ಎಲ್ಲಾ ದಾಖಲೆಗಳನ್ನು ದಾವಾ ಸೊತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲೆಯನ್ನು ಸೃಷ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಹೇಳಿರುವಂತೆ ನಾನು ಯಾವುದೇ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅಂಬಾ ಶೆಡ್ತಿಯವರಿಗೆ ನಿಪಿ-1 ರಲ್ಲಿ ಹೇಳಿರುವಂತಹ ದಾವಾ ಸೊತ್ತನ್ನು ಮಾರಾಟ ಮಾಡುವ ಯಾವುದೇ ಉದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ. ಭೂ ನ್ಯಾಯಾ ಮಂಡಳಿಯಿಂದ ಮಂಜೂರಾದ ಯಾವುದೇ ಆಸ್ತಿಯನ್ನು ಮಾರಾಟ ಮಾಡಲು ಕಂದಾಯ

ಇಲಾಖೆಯಿಂದ ನಿರಾಪೇಕ್ಷಣಾ ಪತ್ರ ಬೇಕು ಎಂದರೆ ಸರಿ. ನಿಪಿ-1 ನ್ನು ಮಾಡುವ ಪೂರ್ವದಲ್ಲಿ ನಿರಾಪೇಕ್ಷಣಾ ಪತ್ರ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದ್ರಿ ನಿರಾಪೇಕ್ಷಣಾ ಪತ್ರ ನನ್ನ ಬಳಿ ಇದೆ ಎಂದು ನುಡಿಯುತ್ತಾರೆ. ನಿರಾಪೇಕ್ಷಣಾ ಪತ್ರ ಪಡೆದುಕೊಂಡ ಬಗ್ಗೆ ನಿಪಿ-1 ರಲ್ಲಿ ನಮೂದು ಇಲ್ಲ ಎಂದರೆ ಸರಿ. ನಾನು ಯಾವುದೇ ನಿರಾಪೇಕ್ಷಣಾ ಪತ್ರ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ನೀಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ., ಕಾರ್ಕಳ